ದಿನಾಂಕ 18-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಎನ್., ವಕೀಲರಿಂದಃ**

ಸ್ವತ್ತಿಗೆ ಸಂಬಂದಪಟ್ಟಂತೆ 02 ಅವಾರ್ಡುಗಳು ಆಗಿವೆ ಎಂದರೆ ಸರಿ. ಮೊದಲನೇ ಅವಾರ್ಡನ್ನು ಕೆ.ಎಸ್. ಹೆಗ್ಡೆಯವರು ದಿನಾಂಕ 05-01-1982 ರಂದು ಮಾಡಿರುತ್ತಾರೆ ಎಂದರೆ ಸರಿ. ಒಂದನೇ ಅವಾರ್ಡನ್ನು ಎಫ್.ಡಿ.ಪಿ-7/1978 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಅದರಲ್ಲಿ ನನ್ನ ತಾಯಿಯ ಕವರಿಗೆ ಈ ಶೆಡ್ಯೂಲ್ ಸ್ವತ್ತುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಉಳಿದ ಸ್ವತ್ತುಗಳನ್ನು ಬೇರೆ ಕವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. 2 ನೇ ಅವಾರ್ಡಿನ ಸಂದರ್ಭದಲ್ಲಿ ಎಸ್. ಆರ್. ಹೆಗ್ಡೆರವರನ್ನು ಆರ್ಬಿಟ್ರೇಟರ್ ಆಗಿ ನೇಮಕ ಮಾಡಲಾಗಿತ್ತು ಎಂದರೆ ಸರಿ. ಎರಡನೇ ಅವಾರ್ಡನ್ನು ದಿನಾಂಕ 29-08-1990 ರಂದು ಅರ್ಬಿಟ್ರೆಷನ್ ಸಂಖ್ಯೆ-4/90 ರಲ್ಲಿ ಮಾಡಲಾಗಿದೆ ಎಂದರೆ ಸರಿ. ನಂತರ ದಿನಾಂಕ 21-12-1991 ರಂದು ಅವಾರ್ಡುಗಳ ಆಧಾರದ ಮೇಲೆ ಕಾಂಪೊಸಿಟ್ ಪೈನಲ್ ಡಿಕ್ರಿಯನ್ನು ಬರೆಯಲಾಯಿತು ಎಂದರೆ ಸರಿ. ಎರಡನೇ ಅವಾರ್ಡನ್ನು ಬರೆಯುವಾಗ ಸ.ನಂ.177/3 ಹೆರ್ಗ ಗ್ರಾಮವನ್ನು ಒಟ್ಟಿಗೆ ಹಾಕಲಾಯಿತು ಎಂದರೆ ಸರಿ. ಆ ಕಾರಣದಿಂದ ಕೆ. ಎಸ್. ಹೆಗ್ಡೆಯವರು ಮಾಡಿದ ಅವಾರ್ಡನ್ನು ಸ್ವಲ್ಪ ಮಾಡಿಪೈ ಮಾಡಲಾಯಿತು ಎಂದರೆ ಸರಿ.

2. ಸ.ನಂ.177/3 ರ ಒಟ್ಟು ವಿಸ್ತೀರ್ಣ 10 ಎಕರೆ 3 ಸೆಂಟ್ಸ್ ಎಂದರೆ ಸರಿ. ಸ.ನಂ.177/3 ರಲ್ಲಿ 10 ಎಕರೆ 3 ಸೆಂಟ್ಸ್ ನಲ್ಲಿ 1 ಎಕರೆ 87 ಸೆಂಟ್ಸ್ ಮತ್ತು 13 ಸೆಂಟ್ಸ್ ಅನ್ನು ನನ್ನ ಸಹೋದರ ಹರೀಶ್ ರವರಿಗೆ ಕೆ. ಎಸ್. ಹೆಗ್ಡೆಯಮರ ಅವಾರ್ಡಿನಲ್ಲಿ ಕೊಡಲಾಯಿತು ಎಂದರೆ ಸರಿ. ಸದರಿ ಅವಾರ್ಡಿನಲ್ಲಿ ನನ್ನ ಸಹೊದರಿ ಮಾಯಾರವರಿಗೆ ಸ.ನಂ.177/3 ರಲ್ಲಿ 1 ಎಕರೆ 87 ಸೆಂಟ್ಸ್ ಜಾಗವನ್ನು ಅಲಾಟ್ ಮಾಡಲಾಯಿತು ಎಂದರೆ ಸರಿ. ಅದೇ ಸ.ನಂಬ್ರದಲ್ಲಿ 5 ಎಕರೆ 71 ಸೆಂಟ್ಸ್ ಜಾಗವನ್ನು ನನ್ನ ತಾಯಿ ರುಕ್ಮಿಣಿ ಹೆಗ್ಡೆ ರವರಿಗೆ ಕೊಡಲಾಯಿತು ಎಂದರೆ ಸರಿ. ಅದೇ ಸರ್ವೆ ನಂಬ್ರದಲ್ಲಿ ಉತ್ತರದ ಕಡೆಯ 47 ಸೆಂಟ್ಸ್ ಜಾಗವನ್ನು ರಸ್ತೆಗಾಗಿ ಮೀಸಲಿಡಲಾಗಿದೆ ಎಂದರೆ ಸರಿ. ಎಸ್. ಆರ್. ಹೆಗ್ಡೆರವರು ಮಾಡಿದ ಮಾಡಿಪೈ ಅವಾರ್ಡಿನಲ್ಲಿ ಸರ್ವೆ ನಂಬ್ರ-177/3 ರಲ್ಲಿ ಹರೀಶ್ ರವರಿಗೆ 1 ಎಕರೆ

87 ಸೆಂಟ್ಸ್ ಮತ್ತು 13 ಸೆಂಟ್ಸ್ ಜಾಗವನ್ನು ಕೊಡಲಿಲ್ಲ ಎಂದರೆ ಸರಿ. ನನ್ನ ತಾಯಿಗೆ ಸರ್ವೆ ನಂಬ್ರ-177/3 ರಲ್ಲಿ 5 ಎಕರೆ 71 ಸೆಂಟ್ಸ್ ಅಲಾಟ್ ಆಗಿದ್ದರಲ್ಲಿ ಕೇವಲ 70 ಸೆಂಟ್ಸ್ ಜಾಗವನ್ನು ಮಾಡಿಪ್ಪೈ ಮಾಡಿದ ಅವಾರ್ಡಿನಲ್ಲಿ ಕೊಡಲಾಯಿತು ಎಂದರೆ ಸಾಕ್ಷಿ, 71 ಸೆಂಟ್ಸ್ ಕೊಡಲಾಯಿತು ಎಂದು ತಿಳಿಸಿರುತ್ತಾರೆ. ಸರ್ವೆ ನಂಬ್ರ-177/3 ರಲ್ಲಿ ನನ್ನ ತಾಯಿಗೆ ಕೊಟ್ಟ 70 ಸೆಂಟ್ಸ್ ಜಾಗ ಪಶ್ಚಿಮದ ಮದ್ಯ ಭಾಗದಲ್ಲಿ ಕೊಡಲಾಯಿತು ಎಂದರೆ ಸಾಕ್ಷಿಯು ಪಶ್ಚಿಮಾರ್ಧದ ದಕ್ಷಿಣ ಭಾಗವನ್ನು ಕೊಡಲಾಯಿತು ಎಂದು ತಿಳಿಸಿರುತ್ತಾರೆ. ನನ್ನ ತಾಯಿಗೆ 70 ಸೆಂಟ್ಸ್ ಜಾಗವನ್ನು ನಾನು ಹೇಳುವಂತೆ ಪಶ್ಚಿಮಾರ್ಧದ ದಕ್ಷಿಣ ಭಾಗವನ್ನು ಕೊಡಲಿಲ್ಲ ಎಂದರೆ ಸರಿಯಲ್ಲ. ಪಶ್ಚಿಮಾರ್ಧದ ಮದ್ಯ ಭಾಗವನ್ನು ಮಾತ್ರ ಕೊಡಲಾಯಿತು ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ., ಉಡುಪಿ.